



# ‘ನಕ್ಷತ್ರ’ ಸುರಿಸಿದ ದೊಡ್ಡೆಲೆಭೋಗಿ!

ಕಾಡ ಹಾದಿಯಲ್ಲಿ ಹೆಜ್ಜೆಹಾಕುವಾಗ ನಕ್ಷತ್ರಗಳ ರಾಶಿಯೇ ಎದುರಾದಂತಾಯಿತು. ಅರೇ ಇದೇನಪ್ಪ ಆಗಸದಲ್ಲಿರಬೇಕಾದ ಅಷ್ಟೂ ನಕ್ಷತ್ರಗಳು ಧರೆಗುರುಳಿಬಿಟ್ಟಿವೆ ಅನಿಸಿ, ತುಸು ದಿಟ್ಟಿಸಿದೆ. ಅವು ನಕ್ಷತ್ರಗಳಲ್ಲ ನಕ್ಷತ್ರದಾಕಾರದ ಹೂಗಳೆಂದು ಖಾತರಿಯಾಯಿತು. ಅಲ್ಲೇ ಸಮೀಪವಿದ್ದ, ಬೃಹದಾಕಾರದ ಮರವೊಂದು ಕಣ್ಣಿಗೆ ಬಿತ್ತು. ಆಗ ಸ್ಪಷ್ಟವಾಯಿತು, ನಕ್ಷತ್ರದ ಈ ಹೂಮಳೆಯನ್ನು ಸುರಿಸಿದ್ದು ಇದೇ ಮರವೆಂದು. ಹಾಗೇ ಅದರ ವಿಶೇಷತೆ ಹುಡುಕಹೊರಟೆ.

ಈ ಮರದ ಹೆಸರು ದೊಡ್ಡೆಲೆಭೋಗಿ. ಬಿಳಿತಿರುಪ್ಪು, ಹೆಗ್ಗೆ, ಕಲ್ಮರ ಎಂದೆಲ್ಲಾ ಕರೆಸಿಕೊಳ್ಳುವ ಈ ಮರವು ದೀರ್ಘಾಯುಷಿ. ಪೊಂಗ, ಹೈಗ, ಕಲ್ಭೋವು, ಉನ್ನಿ ಅನ್ನುವ ಹೆಸರೂ ಇದೆ. ಶರತ್ ಕಾಲ ಪ್ರಾರಂಭದ ವೇಳೆ ಹೂವು ಬಿಡುತ್ತದೆ. ನಂತರ ಕಾಯಿಕಟ್ಟುತ್ತದೆ. ಈ ವೇಳೆಯಲ್ಲೂ ಇದರ ಹೂ ಗೊಂಚಲು ನೋಡುಗರಿಗೆ ಹಿತ ನೀಡುತ್ತದೆ. ಹೂವುಗಳು ನಕ್ಷತ್ರದ ಆಕೃತಿಯನ್ನೇ ಹೋಲುತ್ತವೆ. ಪಶ್ಚಿಮ ಘಟ್ಟಗಳಲ್ಲಿ ಹೇರಳವಾಗಿರುವ ಈ ಮರ ಅತ್ಯಂತ ಗಟ್ಟಿಮುಟ್ಟಾದದ್ದು.

ದೊಡ್ಡೆಲೆಭೋಗಿಯ ವೈಜ್ಞಾನಿಕ ಹೆಸರು ಹೊಪಿಯಾ ಪೊಂಗ (**Hopea ponga**). ಇದು ಡಿಪ್ಟೆರೊಕ್ಯಾರ್ಪಸೀಸ್ ಕುಟುಂಬಕ್ಕೆ (ಸಾಲ್ ಫ್ಯಾಮಿಲಿ) ಸೇರಿದೆ. ಈ ಮರವು ಬಿಡುವ ಬಿಳಿ ಬಣ್ಣದ ಚಿಕ್ಕ ಚಿಕ್ಕ ಹೂವುಗಳು ನೋಡುವುದಕ್ಕೆ ಅತ್ಯಾಕರ್ಷಕವಾಗಿ ಕಾಣುತ್ತವೆ. ಹೂವು ಅರಳಿದ ಮರುದಿನವೇ ಅದು ಉದುರ ತೊಡಗುತ್ತದೆ. ಚಳಿಗಾಲದ ಆರಂಭದಲ್ಲಿ ಹೂವು ಬಿಡುತ್ತದೆ. ದಪ್ಪ ಹಾಗೂ ಗಟ್ಟಿಮುಟ್ಟಾದ ಈ ಮರವನ್ನು ಕಟ್ಟಡ ನಿರ್ಮಾಣಕ್ಕೆ ಹೆಚ್ಚಾಗಿ ಬಳಸುತ್ತಾರೆ.

**–ದಿನೇಶ್ ಸಿ.ಎಚ್., ದಕ್ಷಿಣ ಕನ್ನಡ**





# ಸುಂದರ ಕಲಾಕೃತಿ ಗುಬ್ಬಿಚಟ್ಟು

ದತ್ತ ಜಯಂತಿ ನಿಮಿತ್ತ ನಮ್ಮ ಸಂಬಂಧಿಕರಾದ ನವನಗರದ ಅಮೃತ್ ಜೋಶಿ ಅವರ ಮನೆಗೆ ಹೋಗಿದ್ದೆ. ಅಲ್ಲಿ ತೊಟ್ಟಿಲು, ಗುಬ್ಬಿಚಟ್ಟು ಅಂತ ನಮ್ಮ 80 ವರ್ಷದ ಮಾಮಿ ಹೇಳುತ್ತಿದ್ದರೆ, ಗುಬ್ಬಿಚಟ್ಟು ಅಂದರೆ ಏನು ಮಾಮಿ ಅಂತ ಕೇಳಿದೆ.

ಆಗ ಅವರು ತಮ್ಮ ತಾಯಿ ಸ್ವತಃ ಮಾಡಿದ ಅತಿ ಸುಂದರವಾದ, ಜೋಪಾನವಾಗಿ ಬೆಡ್‌ಶೀಟ್‌ನಲ್ಲಿ ಸುತ್ತಿಟ್ಟ ಗುಬ್ಬಿಚಟ್ಟು ತೆಗೆದು ತೋರಿಸಿದರು. ಅದರ ಚಿತ್ರವೇ ನೀವು ನೋಡುತ್ತಿರುವುದು.

ಇದು ಸುಮಾರು 60 ವರ್ಷ ಹಳೆಯದಾಗಿದ್ದು, ಇನ್ನೂ ಸುಸ್ಥಿತಿಯಲ್ಲಿದೆ. ತೊಟ್ಟಿಲಲ್ಲಿ ಮಲಗಿದ ಮಗುವಿಗೆ ಕಾಣುವ ಹಾಗೆ ಮೇಲೆ ತೂಗು ಹಾಕಿರುತ್ತಾರೆ. ಗುಬ್ಬಿಚಟ್ಟು ಎಂದರೆ ಕೇಳದವರು, ತಿಳಿಯದವರು ಖಂಡಿತ ಈ ಸುಂದರವಾದ ಕಲಾಕೃತಿಯನ್ನು ನೋಡಿ ಕಣ್ತುಂಬಿಕೊಳ್ಳಬೇಕು.

**–ವಿದ್ಯಾ ಗಾಯತ್ರಿ ಜೋಶಿ**